**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 09-02-2026:</u>**

**<u>ಪಾಟೀಸವಾಲುಃ 1ನೇ ಆರೋಪಿ ಪರ ಶ್ರೀ ಎ ಹೆಚ್ ಬಿ ವಕೀಲರಿಂದಃ</u>**

ನನಗೆ ವಿಶ್ಲೇಷಣೆಗಾಗಿ ಕಳುಹಿಸಿದ ಮಾದರಿ ವಸ್ತುಗಳನ್ನು ಯಾವಾಗ ವಶಪಡಿಸಿಕೊಂಡಿರುತ್ತಾರೆಂಬ ಮಾಹಿತಿ ನನಗೆ ಇರುವುದಿಲ್ಲ. ನನಗೆ ಮಹಜರ್ ಕಾಪಿ ಕಳುಹಿಸಿದ್ದರು, ಆದರೆ ನಾನು ಅದನ್ನು ನೋಡಿರುವುದಿಲ್ಲ. ಅದನ್ನು ವಶಪಡಿಸಿಕೊಳ್ಳುವಾಗ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ್ದಾರೋ ಇಲ್ಲವೋ ಎಂಬುದನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಅದು ನನಗೆ ಸಂಬಂಧಪಟ್ಟದ್ದಲ್ಲ, ತನಿಖಾಧಿಕಾರಿಗೆ ಸಂಬಂಧಪಟ್ಟದ್ದು ಎನ್ನುತ್ತಾರೆ. ಯಾವುದೇ ವಸ್ತುವನ್ನು ಅನುಸರಿಸಬೇಕಾದ ಕ್ರಮ ಅನುಸರಿಸದೆ ವಶಪಡಿಸಿಕೊಂಡಲ್ಲಿ, ಅದನ್ನು ನಾನು ವಿಶ್ಲೇಷಣೆಗೆ ಒಳಪಡಿಸಿದಾಗ ಸರಿಯಾದ ಫಲಿತಾಂಶ ಬರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅದು ಬಂದಾಗ ಸೀಲಾಗಿ ಬಂದಿತ್ತು, ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿತ್ತು ನಾನು ಮಾಡಿರುವ ಪರೀಕ್ಷೆ ಸರಿಯಾಗಿದೆ ಹಾಗೂ ಫಲಿತಾಂಶವೂ ಸರಿಯಾಗಿದೆ ಎನ್ನುತ್ತಾರೆ. ನಾನು 5-3-2010 ರಿಂದ 6-3-10 ರವರೆಗೆ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ. ಈ ವಿಚಾರವನ್ನು ವರದಿಯಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿಯು ದಿಃ6-3-10 ಎಂದು ನಿಪಿ-83ರಲ್ಲಿ ದಿನಾಂಕವನ್ನು ನಮೂದಿಸಿದ್ದೇನೆ ಎನ್ನುತ್ತಾರೆ. Morphin ಎಂಬುದು sedative and painkiller ಎಂದರೆ ಸರಿ. ಅದು ಒ ಪಿ alkaloid ಆಗಿರುತ್ತದೆ. Morphin ನಲ್ಲಿ ಮೆಡಿಕಲ್ ಡೋಸ್ ಎಷ್ಟಿರುತ್ತದೆ ಎಂಬುದನ್ನು ನನಗೆ ಹೇಳಲಾಗುವುದಿಲ್ಲ, ಫಾರ್ಮಸಿಯವರು ಹೇಳಬೇಕಾಗುತ್ತದೆ. 10 ರಿಂದ 15 ರಷ್ಟು ಮೆಡಿಕಲ್ ಡೋಸ್ ಇತ್ತು ಎಂದರೆ ಸಾಕ್ಷಿಯು ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. Morphin contents ಆ ವಸ್ತುವನ್ನು ಸಂಗ್ರಹಿಸಿದ ರೀತಿ ಮತ್ತು ವಾತಾವರಣವನ್ನು ಹೊಂದಿಕೊಂಡು ಡಿಕಾಂಪೋಸ್ ಆಗುವ ಸಾಧ್ಯತೆ ಇರುತ್ತದೆ. ನನಗೆ ಆ ವಸ್ತುಗಳು ಬಂದಾಗ ಡಿಕಾಂಪೋಸ್ ಆಗಿರಲಿಲ್ಲ. ನಾನು ಪರೀಕ್ಷೆಗೆ ಒಳಪಡಿಸಿದ ವಸ್ತುಗಳಲ್ಲಿ ಆ ವಸ್ತುಗಳು ತಯಾರಾದ ದಿನಾಂಕ june 2009 expiry date May 2012 ಇತ್ತು. ನನ್ನ ವರದಿಯಲ್ಲಿ ಅದನ್ನು ಕಾಣಿಸಿಲ್ಲ ಎಂದರೆ ಸಾಕ್ಷಿಯು ಆ ಪರೀಕ್ಷೆಯನ್ನು ಮಾಡುವಾಗ ಪ್ರತ್ಯೇಕವಾಗಿ ನಿರ್ವಹಿಸಿದ observation note ನಲ್ಲಿ ಬರೆದಿದ್ದೇನೆ ಎನ್ನುತ್ತಾರೆ. ಸದರಿ observation note ನ್ನು ನನ್ನ ವರದಿ ಜೊತೆಗೆ ಕೊಟ್ಟಿಲ್ಲ.

2.ನಾನು sampling ಗೆ 2 ಎಂ ಎಲ್ ತೆಗೆದಿರುತ್ತೇನೆ, ಅದನ್ನು ಸಂಪೂರ್ಣವಾಗಿ ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ. ಅದನ್ನು ನನ್ನ ವರದಿಯಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ಕಾಣಿಸಿಲ್ಲ ಎನ್ನುತ್ತಾರೆ. ಪ್ರತಿ ಸ್ಯಾಂಪ್ಲಿಂಗ್ ನ್ನು ಪರೀಕ್ಷೆಗೆ ಒಳಪಡಿಸಿರುತ್ತೇನೆ. ಆ 2 ಎಂ ಎಲ್ ನಲ್ಲಿ ಎಷ್ಟೆಷ್ಟು ಪ್ರಮಾಣವನ್ನು ಯಾವ ಯಾವ ಟೆಸ್ಟ್ ಗೆ ಒಳಪಡಿಸಿದ್ದೇನೆಂದು ಕಾಣಿಸಿಲ್ಲ ಎಂದರೆ ನಿಜ. Thin layer chromatography test ನಲ್ಲಿ ಪ್ರತಿ ಕಂಟೆಂಟ್ ನ ವ್ಯಾಲ್ಯೂ ಬದಲಾಗುತ್ತದೆ ಎಂದರೆ ಸಾಕ್ಷಿಯು RF value is based on solvent system ಎನ್ನುತ್ತಾರೆ. Marquisreagunt ಇದನ್ನು thin layer test ಗೆ ಉಪಯೋಗಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವರದಿಯಲ್ಲಿ Marquis test ನಲ್ಲಿ ನಾನು dried sample ಎಂದು ಕಾಣಿಸಿದ್ದೇನೆ, ಅದು ಏನೆಂದರೆ ಸಾಕ್ಷಿಯು ಕಳುಹಿಸಿದ ವಸ್ತುವಿನಲ್ಲಿ 0.5 ಎಂ.ಎಲ್ ನ್ನು ತೆಗೆದು ಅದಕ್ಕೆ Marquisreagunt ಹಾಕಿ ಮಾಡುತ್ತೇವೆ ಎನ್ನುತ್ತಾರೆ. Thin layer chromatography test ನಲ್ಲಿ violet colour spot with RF ಸಮ 75 ಎಂದು ಬಂದಿದ್ದರಿಂದ Buprinorphin positive ಎಂದು ಕಾಣಿಸಿದ್ದೇನೆ ಅದು ಪರ್ಪಲ್ ಕಲರ್ ಬಂದರೆ ಮಾತ್ರ ಅದು ಸಾಧ್ಯ ಎಂದರೆ ಸಾಕ್ಷಿಯು ಅದು concentration of sample ನ್ನು ಅನುಸರಿಸಿಕೊಂಡಿದೆ ನನಗೆ ಬಂದಿರುವುದು violet colour spot with RF 75 ಅದರಿಂದಲೇ ಕಾಣಿಸಿದ್ದೇನೆ ಎನ್ನುತ್ತಾರೆ. purple colour with RF 75 ಯಾವಾಗ ಬರುತ್ತದೆ ಎಂದರೆ ಸಾಕ್ಷಿಯು various concentration of morphin drugs ಬರುತ್ತದೆ ಎನ್ನುತ್ತಾರೆ.

3.3ನೇ ಪರೀಕ್ಷೆಯಲ್ಲಿ, violet colour ಎಂದು ಬರೆದಿರುತ್ತೇನೆ, ಅದಕ್ಕಿಂತ ಮೊದಲು ಬೇರೆ ಬೇರೆ ಬಣ್ಣ ಬರುತ್ತದೆ ಎಂದರೆ ಸಾಕ್ಷಿಯು ಸ್ಯಾಂಪಲ್ ಗಳನ್ನು concentration ಮಾಡುತ್ತಾ ಹೋದರೆ ಬಣ್ಣ ಬದಲಾಗುತ್ತಾ ಹೋಗುತ್ತದೆ ಎನ್ನುತ್ತಾರೆ. 3ನೇ ಪರೀಕ್ಷೆ ಮಾಡುವಾಗ ಮೊದಲು ಪರ್ಪಲ್, ನಂತರ ರೆಡ್, ನಂತರ ನಿಧಾನವಾಗಿ ವೈಲೆಟ್ ನಂತರ ನೀಲದಿ ಬಣ್ಣಕ್ಕೆ ಬರುತ್ತದೆ ಎಂದರೆ ಸಾಕ್ಷಿಯು ನಾನು concentration ಮಾಡಿರುವುದು morphin ಒಂದ ರ ಮೇಲೆ ಅಲ್ಲ, buprinorphin ಮೇಲೆ, ಆದ್ದರಿಂದ ವೈಲೆಟ್ ಕಲರ್ ಬರುವುದು ಎನ್ನುತ್ತಾರೆ. norphine and morphin are different ಎಂದರೆ ಸಾಕ್ಷಿಯು buprinorphin is derivative of morphin ಎನ್ನುತ್ತಾರೆ. ನಾನು ಮಾಡಿದ ಪರೀಕ್ಷೆಗಳು

ಅಂತಿಮ ನಿರ್ಣಯವನ್ನು ನೀಡುವಂತಹ ಪರೀಕ್ಷೆಗಳಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಕೋರಿಕೆ ಮೇರೆಗೆ ಅವರಿಗೆ ಬೇಕಾಗುವ ರೀತಿಯಲ್ಲಿ ಆ ವರದಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಆ ವ್ಯವಸ್ಥೆ ನಮ್ಮಲ್ಲಿಲ್ಲ ಎನ್ನುತ್ತಾರೆ. ನಾನು ನೀಡಿರುವ ವರದಿ conclusive ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ವಿಸಿ ಮೂಲಕ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**